

ಜಯಂತ ಕಾಯ್ಕಿಣಿ

ಕಲ್ಪಿಸುವ ಸಾಧ್ಯತೆ ಇರುವುದಂತೂ ಸತ್ಯ. ಆದರೆ ಈ ಪರಿಕಲ್ಪನೆಯೂ ಕ್ವಾರಂಟೈನ್ ಮುಗಿಸಿ ಯಾವಾಗ ಹೊರಬರುವುದೋ ನೋಡಬೇಕು.

ಇಷ್ಟೇ ಅಲ್ಲ, ಪವನ್ ತಮ್ಮ ವೃತ್ತಿಬದುಕಿನ ನೆನಪುಗಳನ್ನು, ಸ್ವಾರಸ್ಯಕರ ಸಂಗತಿಗಳನ್ನು ಪಾಡ್‌ಕಾಸ್ಟ್ ಮೂಲಕ ಅಭಿಮಾನಿಗಳೊಂದಿಗೆ ಹಂಚಿಕೊಳ್ಳುತ್ತಿದ್ದಾರೆ. ಇದಕ್ಕಾಗಿಯೇ ಟೆಲಿಗ್ರಾಮ್‌ನಲ್ಲಿ ಒಂದು ಖಾತೆಯನ್ನೂ ತೆರೆದಿದ್ದಾರೆ.

ಈ ತಿಂಗಳ ಆರಂಭದಲ್ಲಿಯೇ ಜಯಂತ್ ಕಾಯ್ಕಿಣಿ ಕೊರೊನಾ ಬಗ್ಗೆಯೇ ಒಂದು ಹಾಡು ಬರೆದು ಅದನ್ನು ಎಸ್.ಪಿ. ಬಾಲಸುಬ್ರಹ್ಮಣ್ಯ ಅವರಿಗೆ ಕಳಿಸಿದ್ದರು. ಎಸ್‌ಪಿಬಿ ಅದಕ್ಕೆ ಸಂಗೀತ ಸಂಯೋಜಿಸಿ ಹಾಡಿದ್ದರು. ಆ ಹಾಡು ಸಾಮಾಜಿಕ ಮಾಧ್ಯಮಗಳಲ್ಲಿ ಸಾಕಷ್ಟು ವೈರಲ್ ಆಗಿತ್ತು.



ಪವನ್ ಒಡೆಯರ್

ಯುವ ನಿರ್ದೇಶಕ ಪನ್ನಗಭರಣ ಅವರ ಪರಿಕಲ್ಪನೆಯೂ ಗಮನಸೆಳೆಯುವಂತಿದೆ. ಅವರೂ ಕೊರೊನಾ ಪರಿಸ್ಥಿತಿ, ಅದರಿಂದ ಬಡವರಿಗೆ ಉಂಟಾದ ಸಂಕಟಗಳು, ನಾವೆಲ್ಲರೂ ಒಟ್ಟಿಗೇ ಅದನ್ನು ಎದುರಿಸಬೇಕಾದ ಅಗತ್ಯವನ್ನು ಒತ್ತಿಹೇಳುವ ಒಂದು ವಿಡಿಯೊ ಸಾಂಗ್ ಅನ್ನು ಬಿಡುಗಡೆ ಮಾಡಿದ್ದಾರೆ. ನಿರ್ದೇಶಕ ಡಿ. ಸತ್ಯಪ್ರಕಾಶ್ ಬರೆದಿರುವ ಸಾಹಿತ್ಯಕ್ಕೆ ನಾಬಿನ್ ಪೌಲ್ ಸಂಗೀತ ಸಂಯೋಜನೆ ಮಾಡಿದ್ದಾರೆ. ವಾಸುಕಿ ವೈಭವ್ ಧ್ವನಿಯಾಗಿದ್ದಾರೆ. ಈ ಹಾಡಿಗೆ ಪುನೀತ್ ರಾಜ್‌ಕುಮಾರ್, ಧನಂಜಯ್, ಚಿರಂಜೀವಿ ಸರ್ಜಾ, ಮೇಘನಾ, ದಿಗಂತ್, ಪ್ರಜ್ವಲ್ ದೇವರಾಜ್, ಶ್ರೀಮುರಳಿ, ವಿಜಯ ರಾಘವೇಂದ್ರ, ಐಂದ್ರಿತಾ ರೇ ಸೇರಿದಂತೆ ಹಲವು ಸಿನಿಮಾ ನಟರು ಸೆಲ್ಫೀ ಸಾಥ್ ನೀಡಿದ್ದಾರೆ. ಸೋಷಿಯಲ್ ಮೀಡಿಯಾದಲ್ಲಿಯೂ ಈ ವಿಡಿಯೊ ಸಾಕಷ್ಟು ವೈರಲ್ ಆಗಿದೆ.



ಕಲಾ ನಿರ್ದೇಶನ, ನಿರೂಪಣೆ, ನಟನೆ, ನಿರ್ದೇಶನ ಹೀಗೆ ಬಹುಮುಖಿ ಪ್ರತಿಭೆಯಿಂದ ಗುರ್ತಿಸಿಕೊಂಡಿರುವ ಅರುಣ್ ಸಾಗರ್ ಕೂಡ ಕೊರೊನಾ ಕುರಿತಂತೆ ಹರಿಕಥೆ ಶೈಲಿಯಲ್ಲಿ ಒಂದು ವಿಡಿಯೊ ಮಾಡಿ ಹರಿಬಿಟ್ಟಿದ್ದಾರೆ. ಎಲ್ಲ ಜಾತಿ, ಧರ್ಮ, ಮತ, ಪಂಗಡಗಳಿಗಿಂತ ಮನುಷ್ಯತ್ವ ಮೇಲು. ಅದನ್ನು ಮರೆತ ಮನುಷ್ಯನಿಗೆ ಪಾಠ ಕಲಿಸಲೆಂದೇ ಕೊರೊನಾ ವೈರಸ್ ಬಂದಿರುವ ಹಾಗಿದೆ. ನಮ್ಮೆಲ್ಲರ ಎದೆಯೊಳಗಿನ ಸಣ್ಣತನಗಳ ವೈರಸ್ ಹೋಗದ ಹೊರತು ಕೊರೊನಾ ಹೋಗುವುದಿಲ್ಲ ಎಂಬುದೇ ಈ ವಿಡಿಯೊ ಆಶಯ.

ಸಿಹಿಕಹಿ ಚಂದ್ರು, ಸುಂದರ್, ವೀಣಾಸುಂದರ್ ಅವರೆಲ್ಲ ಸೇರಿಕೊಂಡು ಸೆಲ್ಫಿ ವಿಡಿಯೊ ಮೂಲಕ ನಗೆಹಬ್ಬ ಮಾಡುತ್ತಿದ್ದಾರೆ. ಹಿರಿಯ ನಟಿ ಜಯಲಕ್ಷ್ಮೀ ಪಾಟೀಲ್ ಕೂಡ ನಾಟಕದ ಕೆಲವು ಭಾಗಗಳನ್ನು ಸೆಲ್ಫೀ ವಿಡಿಯೊ ಮಾಡಿ ಹರಿಬಿಟ್ಟಿದ್ದಾರೆ.

ಇನ್ನು ಗುರುಪ್ರಸಾದ್ ಲಾಕ್‌ಡೌನ್‌ನಲ್ಲಿ ಸಿನಿಮಾವನ್ನೇ ಮಾಡಲು ಹೊರಟಿರುವ ಬಗ್ಗೆ ಕಳೆದ ವಾರ ಇದೇ ಪುಟದಲ್ಲಿ ಬರೆಯಲಾಗಿತ್ತು. ಕೆಜಿಎಫ್‌ನ ರೂಪಾ ರಾಯಪ್ಪ, ಪತ್ರಕರ್ತ, ನಟ ಯತಿರಾಜ್ ಸೇರಿದಂತೆ ಹಲವರು ಸೆಲ್ಫೀ ಮೂಲಕವೇ ದೃಶ್ಯಕಟ್ಟಿ ಅಂತರ್ಜಾಲದಲ್ಲಿ ಸದ್ದು ಮಾಡುತ್ತಿದ್ದಾರೆ.

ಒಟ್ಟಾರೆ ಗಾಂಧಿನಗರ ಆನ್‌ಲೈನ್‌ನಲ್ಲಿ ಆ್ಯಕ್ಟಿವ್ ಆಗಿದೆ. ಇದು ಹೊಸ ವೇದಿಕೆಯೊಂದು ಗಟ್ಟಿಗೊಳ್ಳುವ ಸೂಚನೆಯೂ ಇರಬಹುದು. ■

# ಅಕುಲ್ ಎಡವಟ್ಟು!

ಒಂದು ಕಡೆಯಲ್ಲಿ ಚಂದನವನದ ಹಲವರು ಕೊರೊನಾ ವೈರಸ್ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನ ಮಾಡುತ್ತಿದ್ದಾರೆ. ಬಡಜನರಿಗೆ, ಚಿತ್ರರಂಗದ ದಿನಗೂಲಿ ಕಾರ್ಮಿಕರಿಗೆ ಸಾಧ್ಯವಾದಷ್ಟು ಸಹಾಯವನ್ನೂ ಮಾಡುತ್ತಿದ್ದಾರೆ. ಆದರೆ ಇನ್ನೊಂದೆಡೆ ಲಾಕ್‌ಡೌನ್ ಎನ್ನುವುದು ತಮ್ಮ ಅಭಿಮಾನಿಗಳಿಗೆ ಮಾತ್ರ; ನಮಗಲ್ಲ. ನಾವು ತಾರೆಯರು ನೆಲದ ನಿಯಮಗಳು ತಮಗೆ ಅನ್ವಯಿಸುವುದಿಲ್ಲ ಎಂಬ ಮನೋಭಾವನೆಯಿಂದ ಎಗ್ಗಿಲ್ಲದೆ ಬಗೆಬಗೆಯಲ್ಲಿ ಕಾನೂನುಬಾಹಿರ ಕೆಲಸಗಳನ್ನು ಮಾಡಿ ಸುದ್ದಿಯಾಗುತ್ತಿದ್ದಾರೆ. ಎರಡು ವಾರಗಳ ಹಿಂದೆ ನಟಿ ಶರ್ಮಿಳಾ ಮಾಂಡ್ರೆ ಹೀಗೆ ನಿಶಾಹೊತ್ತಿನಲ್ಲಿ ನಶಾಭರಿತರಾಗಿ ಸಿಕ್ಕಿಬಿದ್ದು ಸುದ್ದಿಯಾಗಿದ್ದರು. ಈಗ ಕಿರುತೆರೆ ನಟ, ರಿಯಾಲಿಟಿ ಷೋಗಳ ನಿರೂಪಕನಾಗಿ ಪ್ರಸಿದ್ಧನಾಗಿರುವ ಅಕುಲ್ ಬಾಲಾಜಿ ಅವರ ಸರದಿ.

ಹಾ, ಇವರು ಲಾಕ್‌ಡೌನ್ ಸಮಯದಲ್ಲಿ ಊರು ಸುತ್ತಲು ಹೋಗಿ ಸಿಕ್ಕಿಬಿದ್ದಿಲ್ಲ. ಎಲ್ಲರೂ ಒಂದೇ ರೀತಿ ಸಿನಿಮಾಗಳನ್ನು ಮಾಡಿದರೆ ಯಾರು ನೋಡುತ್ತಾರೆ? ಹಾಗೆಯೇ ಎಲ್ಲರೂ ಒಂದೇ ರೀತಿ ತಪ್ಪುಗಳನ್ನು ಮಾಡಿದರೆ ಏನು ಸ್ವಾರಸ್ಯ? ಹಾಗಾಗಿ ಇವರು ಬೇರೆ ದಾರಿ ಹಿಡಿದಿದ್ದಾರೆ.

ದೊಡ್ಡಬಳ್ಳಾಪುರದ ಲಗುಮೇನಹಳ್ಳಿಯಲ್ಲಿ ಅಕುಲ್ ಬಾಲಾಜಿ ಒಡೆತನದ 'ಸನ್‌ಶೈನ್' ಎಂಬ ರೆಸಾರ್ಟ್ ಇದೆ. ದೇಶದಲ್ಲಿಯೇ ರೆಸಾರ್ಟ್, ಹೋಟೆಲ್, ಹೋಂ ಸ್ಟೇಗಳು, ಅಗತ್ಯವಸ್ತುಗಳನ್ನು ಹೊರತುಪಡಿಸಿ ಉಳಿದ ಅಂಗಡಿಗಳೆಲ್ಲ ಬಾಗಿಲು ಹಾಕಿ ಕೂತಿದ್ದರೆ ಸನ್‌ಶೈನ್ ರೆಸಾರ್ಟ್ ಮಾತ್ರ ಹೊರಗೆ ಬಾಗಿಲು ಹಾಕಿದ್ದರೂ ಆಗಾಗ ಕಿಂಡಿ ತೆರೆದು ಒಂದಿಷ್ಟು ಜನರನ್ನು ಒಳಬಿಟ್ಟುಕೊಂಡು ಒಳಗೊಳಗೇ ಪ್ರಕಾಶಮಾನವಾಗಿ ಹೊಳೆಯುತ್ತಿತ್ತಂತೆ. ಸೂರ್ಯಪ್ರಕಾಶದ ಹೊಳಪು ಮುಗಿದು ಚಂದ್ರಮ ಮೇಲೆ ಬಂದ ಹಾಗೆಯೂ ಈ ರೆಸಾರ್ಟಿನೊಳಗಿನ ಪ್ರಕಾಶ ಉಜ್ವಲಗೊಳ್ಳುತ್ತಲೇ ಹೋಗುತ್ತಿತ್ತಂತೆ.

ಬೆಂಗಳೂರಿನ ಮದುವೆ ಕಾರ್ಯಕ್ರಮವೊಂದಕ್ಕೆ ಅಕುಲ್ ರೆಸಾರ್ಟ್ ಅನ್ನು ಬಾಡಿಗೆ ಕೊಡಲಾಗಿದೆ. ಮಧ್ಯರಾತ್ರಿ ಕಳೆದರೂ ರೆಸಾರ್ಟಿನೊಳಗೆ ಜನರು ಗುಂಪುಗೂಡಿಕೊಂಡಿರುವುದನ್ನು ನೋಡಿ ಸುತ್ತಲಿನ ಗ್ರಾಮಸ್ಥರು ಕಂಗಾಲಾಗಿದ್ದಾರೆ. ಕೊರೊನಾ ಭೀತಿಯಲ್ಲಿ ಪೊಲೀಸ್ ಕಂಪ್ಲೇಂಟ್ ಕೂಡ ಕೊಡಲಾಗಿದೆ.

ಈಗ ಅಕುಲ್ ಮತ್ತು ಅವರ ಬ್ಯುಸಿನೆಸ್ ಪಾರ್ಟನರ್ ಶ್ರೀನಿವಾಸ ಸುಬ್ರಮಣಿಯಂ ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಇತ್ತ ಅಕುಲ್ 'ತಾನೇನೂ ಮಾಡಿಲ್ಲ; ತನಗೇನೂ ಗೊತ್ತಿಲ್ಲ' ತಲೆಯಾಡಿಸಿ ಮೊಬೈಲ್ ಸ್ವಿಚ್ ಆಫ್ ಮಾಡಿ ಕೂತಿದ್ದಾರೆ. ಪೊಲೀಸ್ ತನಿಖೆ ಜಾರಿಯಲ್ಲಿದೆ. ■

